8.	Chitradurga-Holalkere-Hosadurga-Chickmagalur-Mu digere-Belthangadi-Bantwal-Mangalore (to join NH 17)	283
9.	Dharwar-Londa-Anmod-Panaji (to join NH 17)	95
10.	Padubidri-Karkala-Sringeri-Thirthahalli-Shikari pura-Shiralkoppa-Hubli-Bagalkot-Hungund	550
11.	Sira (on NH4 Bangalore-Poona road)-Madhugiri-Gouribidanur-Chickballapur-Chintamani-Srinivasapura-Mulbagal (on NH 4 Bangalore-Madras road)	160
12.	Chitradurga-Shimoga-Chickmagalur-Sakleshpur-Mercara-Tellicheri	325
13.	Bangalore-Kanakapura-Malavalli-Mysore-Nanjangud - Sultan Battery-Calicut	240

ರಾಷ್ಟ್ರೀಯ ಹೆದ್ದಾರಿಗಳನ್ನು ಹೆಚ್ಚಿಸುವುದು

2060 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) *ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಸಂಖ್ಯೆ ಎಷ್ಟು ಹಾಗೂ ಅವುಗಳ ಉದ್ದ ಎಷ್ಟು?*

ಆ) *ಇವುಗಳ ನಿರ್ವಹಣೆಗಾಗಿ ಕೇಂದ್ರ ಸರ್ಕಾರದಿಂದ ಬರುತ್ತಿರುವ ಹಣವೆಷ್ಟು?*

ಇ) *ಕೇಂದ್ರ ಸರ್ಕಾರಕ್ಕೆ ರಾಜ್ಯದಿಂದ ರಾಷ್ಟ್ರೀಯ ಹೆದ್ದಾರಿಗಳನ್ನು ಹೆಚ್ಚು ಮಾಡಲು ಪ್ರಸ್ತಾವನೆಗಳನ್ನು ಕಳುಹಿಸಲಾಗಿದೆಯೇ?*

ಈ) *ಹಾಗಿದ್ದಲ್ಲಿ ಇವುಗಳನ್ನು ಎಂದು ಕಳುಹಿಸಲಾಯಿತು, ಹಾಗೂ ಈ ಪ್ರಸ್ತಾವನೆಗಳ ಸಂಖ್ಯೆ ಎಷ್ಟು?*

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಏಳು (7) 1997 ಕಿ.ಮೀ. ಗಳು.

ಆ) *8.5* ಕೋಟಿ ರೂ.ಗಳು.

ಇ) ಹೌದು.

ಈ) ಇದುವರೆಗೂ ಒಟ್ಟು 13 ರಾಜ್ಯ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೇಂದ್ರಕ್ಕೆ ಪತ್ರದ ಸಂಖ್ಯೆ ಪಿಡಬ್ಲ್ಯುಡಿ 63 ಸಿಎನ್‌ಹೆಚ್ 73, ದಿನಾಂಕ: 3-5-73, 3-9-84, 11-7-90 ಮತ್ತು 25-1-91ರಲ್ಲಿ ಕಳುಹಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳ ಅಭಿವೃದ್ಧಿ

2074 - ಶ್ರೀ ಗುರುಪಾದಪ್ಪ ನಾಗ್ಮಾರ್‌ಪಲ್ಲಿ (ಔರಾದ್) : ಮಾನ್ಯ ಪರ್ಯಾಟನ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?